ಮಾಹಿತಿ ಹಕ್ಕು ಅಧಿನಿಯಮ 2005

ಪ್ರಕರಣ 4 (1) (ಬಿ)

(ಮಾರ್ಚ್ 2019ರ ಅಂತ್ಯಕ್ಕೆ ಪರಿಷ್ಕೃತ)

Website: www.urbantransport.kar.gov.in

ನಗರ ಭೂ ಸಾರಿಗೆ ನಿರ್ದೇಶನಾಲಯ

ಶಾಂತಿನಗರ, ಬೆಂಗಳೂರು – 560 027.

## 1. ನಗರ ಭೂ ಸಾರಿಗೆ ನಿರ್ದೇಶನಾಲಯ (DULT) ಸಂಸ್ಥಾ ಪಟ್ಟಿ




| | | | |
|---|---|---|---|
| 1. | ಶೀಘ್ರಲಿಪಿಗಾರರು–2 | | **ಗುತ್ತಿಗೆ ನೌಕರರು** |
| 2. | ದಸ್ತಾವೇಜು ತಜ್ಞರು–1 | 1. | ಸಾರ್ವಜನಿಕ ಸಾರಿಗೆ ವಿಶೇಷ ತಜ್ಞರು –1 |
| | | 2. | ಹಿರಿಯ ಸಾರಿಗೆ ಯೋಜಕರು –1 |
| | | 3. | ನಗರ ಯೋಜಕರು –4 |
| | | 4. | ಸಾರಿಗೆ ಯೋಜಕರು–3 |
| 3. | ಪ್ರಥಮ ದರ್ಜೆ ಸಹಾಯಕರು–2 | 5. | ತಾಂತ್ರಿಕ ಮುಖ್ಯಸ್ಥರು–1 |
| | | 6. | ಯೋಜನಾ ವ್ಯವಸ್ಥಾಪಕರು – 1 |
| 4. | ದ್ವಿತೀಯ ದರ್ಜೆ ಸಹಾಯಕರು–2 | 7. | ನಿರ್ವಾಹಕ ವ್ಯವಸ್ಥಾಪಕರು – 1 |
| 5. | ಬೆರಳಚ್ಚುಗಾರರು–2 | 8. | ಡೇಟಾ ಎಂಟ್ರಿ ಆಪರೇಟರ್‌ಗಳು – 5 |
| 6. | ಚಾಲಕರು–1 | 9. | ಸ್ವಾಗತಕಾರರು –1 |
| | | 10. | ಗ್ರೂಪ್ ಡಿ – 6 |
| | | 11. | ವಾಹನ ಚಾಲಕರು–1 |
| | | 12. | ಜಿ.ಐ.ಎಸ್ ವಿಶೇಷ ತಜ್ಞರು–2 |
| | | 13. | ಸಿಸ್ಟಮ್ ಇಂಜಿನಿಯರ್–1 |
| | | 14. | ಸಿವಿಲ್ ಇಂಜಿನಿಯರ್–1 |
| | | 15. | ಕ್ಯಾಡ್ ವಿಶೇಷ ತಜ್ಞರು–2 |
| | | 16. | ಗ್ರಾಫಿಕ್ ಡಿಸೈನರ್–1 |
| | | 17. | ಐ.ಟಿ.ಎಸ್ ವಿಶೇಷ ತಜ್ಞರು–2 |
| | | 18. | ಆರ್ಥಿಕ ವಿಶ್ಲೇಷಕರು–1 |
| | | 19. | ಅಕೌಂಟೆಂಟ್–1 |
| | | 20. | ಇಲೆಕ್ಟ್ರಿಕಲ್ ಇಂಜಿನಿಯರ್–1 |

**ಪ್ರಕಟಣೆ**

ಮಾಹಿತಿ ಹಕ್ಕು ಅಧಿನಿಯಮ 2005 ಕಲಂ 4(1)(ಬಿ)ಯಲ್ಲಿ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿನ ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

**2. ನಗರ ಭೂ ಸಾರಿಗೆ ನಿರ್ದೇಶನಾಲಯ ಅಂಗರಚನೆ ಕಾರ್ಯಗಳು ಮತ್ತು ಕರ್ತವ್ಯಗಳು:**

ನಗರ ಭೂ ಸಾರಿಗೆ ನಿರ್ದೇಶನಾಲಯದ ಸರ್ಕಾರಿ ಆದೇಶ ಸಂಖ್ಯೆ. ನಅಇ 134 ಬಿಎಂಆರ್ 2006 (1) ಬೆಂಗಳೂರು ದಿನಾಂಕ: 08.03.2007ರಂತೆ ರಾಷ್ಟ್ರೀಯ ನಗರ ಸಾರಿಗೆ ನೀತಿ ಮತ್ತು 11ನೇ ನಗರ ಸಾರಿಗೆ ನೀತಿ ಪದ್ಧತಿಯ ಕಾರ್ಯನೀತಿಯ ವರದಿಯನ್ವಯ ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿ ಸ್ಥಾಪಿಸಲಾಗಿದೆ. ಈ ನಿರ್ದೇಶನಾಲಯವು ಜಾರಿಗೆ ಬಂದ ದಿನಾಂಕದಿಂದ ನಗರ ಸಾರಿಗೆಗೆ ಸಂಬಂಧಿಸಿದಂತೆ ಅನೇಕ ಪರಿಣಾಮಕಾರಿ ಕ್ರಮಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ನಗರ ಸಾರಿಗೆಯನ್ನು ಕ್ರಮಬದ್ಧವಾಗಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡುವ ಕಾರ್ಯವನ್ನು ನಿರ್ವಹಿಸುತ್ತಿದೆ. ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಹಿರಿಯ ಶ್ರೇಣಿಯ ಭಾ.ಆ.ಸೇ ಅಧಿಕಾರಿಯನ್ನು ಆಯುಕ್ತರಾಗಿ ನೇಮಿಸಲಾಗಿದೆ. ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯರವರು ಸಮಗ್ರ ಮೇಲ್ವಿಚಾರಣೆ ಕಾರ್ಯನಿರ್ವಹಿಸುತ್ತಾರೆ.

**3. ಇಲಾಖೆಯ ಮೂಲ, ರಚನೆಯ ಉದ್ದೇಶ:**

ನಗರ ಸಾರಿಗೆ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ನಗರ ಸಾರಿಗೆ ನಿರ್ದೇಶನಾಲಯವನ್ನು ನಗರಾಭಿವೃದ್ಧಿ ಇಲಾಖೆಯ ಆಡಳಿತ ಅಧೀನದಲ್ಲಿ ಕರ್ನಾಟಕ ಸರ್ಕಾರವು ರೂಪಿಸಿ ಪ್ರಾರಂಭಿಸಿದೆ. ಇಡೀ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಮಾತ್ರ ನಗರ ಭೂ ಸಾರಿಗೆ ನಿರ್ದೇಶನಾಲಯವನ್ನು ಹೊಂದಿರುವ ರಾಜ್ಯವಾಗಿದೆ. ಈ ನಿರ್ದೇಶನಾಲಯವನ್ನು ದೇಶದಲ್ಲಿ ರಾಷ್ಟ್ರೀಯ ನಗರ ಸಾರಿಗೆ ನೀತಿಯು ಜಾರಿಗೆ ಬಂದ ಹಿನ್ನೆಲೆಯಲ್ಲಿ ನಗರ ಸಾರಿಗೆ ವಿಷಯಗಳ ಸಮಾಲೋಚಿಸಲು 2007ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಈ ನಿರ್ದೇಶನಾಲಯವನ್ನು ಪ್ರಾರಂಭಿಸಿದೆ. ಈ ನಿರ್ದೇಶನಾಲಯವು ರಾಜ್ಯ ನಗರ ಸಾರಿಗೆ ನಿಧಿಯ ಆಡಳಿತವನ್ನು ನಿರ್ವಹಿಸುವುದರೊಂದಿಗೆ ನಗರ ಸಾರಿಗೆ ವಿಷಯಗಳು ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಹೊತ್ತಿದೆ. ಪ್ರಥಮ ಬಾರಿಗೆ ನಗರ ಸಾರಿಗೆ ನೀತಿಯಲ್ಲಿ ನುರಿತ ಸಿಬ್ಬಂದಿಯನ್ನು ಸರ್ಕಾರದ ವ್ಯವಸ್ಥೆಯಲ್ಲಿ ಅಳವಡಿಸಲಾಗಿದೆ.

ಭಾರತ ಸರ್ಕಾರದ ರಾಷ್ಟ್ರೀಯ ನಗರ ಸಾರಿಗೆ ನೀತಿ ಜಾರಿಗೆ ಬಂದ ಬೆನ್ನಹಿಂದೆಯೇ ನಗರ ಭೂ ಸಾರಿಗೆ ನಿರ್ದೇಶನಾಲಯವನ್ನು 2006ರಲ್ಲಿ ಸ್ಥಾಪಿಸಲಾಯಿತು.

ನಗರ ಭೂ ಸಾರಿಗೆ ನಿರ್ದೇಶನಾಲಯದ ಪ್ರಮುಖ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿದ್ದು, ಅವು ನಗರದ ಸಾರಿಗೆ ಸಮಸ್ಯೆಗೆ ಪರಿಹಾರಗಳನ್ನು ಯೋಜಿಸಿ, ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಹತ್ವದ ಬದಲಾವಣೆ ತರುವ ಅಗತ್ಯತೆಯ ಬಗ್ಗೆ ತಿಳಿಸುತ್ತದೆ:

1. ಕಾಲಕಾಲಕ್ಕೆ ಬೇಕಾದ ಸಾರಿಗೆ ಬೇಡಿಕೆಯನ್ನು ಪರಿಶೀಲಿಸುವುದು.
2. ವಿವಿಧ ಮಾರ್ಗಗಳಲ್ಲಿ ಬೇಕಾಗುವ ಸಾರ್ವಜನಿಕ ಸಾರಿಗೆ ಮಟ್ಟವನ್ನು ನಿರ್ಧರಿಸುವುದು ಹಾಗೂ ಬೇಕಾದ ವಿವಿಧ ಬಗೆಯ ಸಾರಿಗೆ ವ್ಯವಸ್ಥೆಯನ್ನು ನಿರ್ಧರಿಸುವುದು.
3. ಮೂಲಭೂತ ಸೌಕರ್ಯಗಳ ರಚನೆಗಾಗಿ ಬೇಕಾದ ಹೊಸ ಹೂಡಿಕೆಗಳ ನಿರ್ಧರಣೆ ಮತ್ತು ಶಿಫಾರಸ್ಸು
4. ಖಾಸಗಿ ವಾಹನ ಮಾಲೀಕರುಗಳ ಮುಖಾಂತರ ಸಾರ್ವಜನಿಕ ಸಾರಿಗೆ ಸೇವೆ ಪಡೆಯುವುದು
5. ನಗರಗಳ ಹಾಗೂ ಹೊಸ ಬಡಾವಣೆಗಳಲ್ಲಿ ರಸ್ತೆ ಜಾಲದ ಅಭಿವೃದ್ಧಿ ಕುರಿತು ಮಾರ್ಗದರ್ಶಿ ನೀತಿ.
6. ನಗರ ಮಟ್ಟದ ಸಾರಿಗೆಗಾಗಿ ಏಕೀಕೃತ ನೀತಿ ರೂಪಿಸಿ ಅಭಿವೃದ್ಧಿಗೊಳಿಸುವುದು.

**4. ನಗರ ಭೂ ಸಾರಿಗೆ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ನೌಕರರ ವಿವರ ಹಾಗೂ ಕರ್ತವ್ಯಗಳು:-**

| ಕ್ರ.ಸಂ | ಅಧಿಕಾರಿಯವರ ಹೆಸರು ಮತ್ತು ಪದನಾಮ | ಕಛೇರಿ ವಿಳಾಸ | ಕರ್ತವ್ಯ ಮತ್ತು ಜವಾಬ್ದಾರಿಗಳು |
|---|---|---|---|
| 1. | ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | ನಿರ್ದೇಶನಾಲಯದ ಮುಖ್ಯಸ್ಥರಾಗಿದ್ದು ಕರ್ನಾಟಕ ಸರ್ಕಾರದ ಕಾಯ್ದೆ ಹಾಗೂ ನಿಯಮಗಳಿಗೆ ಒಳಪಟ್ಟ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಸಮಗ್ರ ಮೇಲ್ವಿಚಾರಣೆ ನಿಯಂತ್ರಣ ಹಾಗೂ ಎಲ್ಲಾ ವ್ಯವಹಾರದ ಜವಾಬ್ದಾರಿಯನ್ನು ಹೊಂದಿರುತ್ತಾರೆ. |
| 2. | ವಿಶೇಷಾಧಿಕಾರಿ | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ನಿರ್ದೇಶನಾಲಯದ ತಾಂತ್ರಿಕ ವಿಭಾಗದ ಮುಖ್ಯಸ್ಥರಾಗಿದ್ದು, ಈ ವಿಭಾಗಕ್ಕೆ ಸಂಬಂಧಪಟ್ಟ ಯೋಜನೆಗಳ ಪ್ರಸ್ತಾವನೆಗಳ ಪರಿಶೀಲನ ಅನುಷ್ಠಾನ ಮೇಲ್ವಿಚಾರಣೆ. ಭೂ ಬಳಕೆ ಸಾರಿಗೆ ನಕ್ಷೆಯ ಉಸ್ತುವಾರಿ ಹಾಗೂ ಈ ಪ್ರಸ್ತಾವನೆಗಳನ್ನು ಅಂಗೀಕರಿಸುವ ಮತ್ತು ಅನುಷ್ಠಾನಗೊಳಿಸುವ ಬಗ್ಗೆ ಆಯುಕ್ತರಿಗೆ ಸೂಕ್ತ ಸಲಹೆ ಹಾಗೂ ಸಹಕಾರ ನೀಡುವುದು.<br>2. ಇವರು ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ.<br>3. ಆಯುಕ್ತರು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ. |
| 3. | ಜಂಟಿ ನಿರ್ದೇಶಕರು | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಆಡಳಿತ ವಿಭಾಗದ ಮುಖ್ಯಸ್ಥರಾಗಿದ್ದು, ಆಡಳಿತ ವಿಭಾಗದ ಮೇಲ್ವಿಚಾರಣೆ ಹಾಗೂ ನಿರ್ದೇಶನಾಲಯಕ್ಕೆ ವೇತನ ಮತ್ತು ಬಟವಾಡೆ ಅಧಿಕಾರಿ ಆಗಿರುವುದರಿಂದ ಹಣಕಾಸಿನ ವಿಚಾರಗಳಿಗೆ ಸಂಬಂಧಪಟ್ಟಂತೆ ಪರಿಶೀಲನೆ ಹಾಗೂ ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರುತ್ತಾರೆ.<br>2. ಈ ವಿಭಾಗಕ್ಕೆ ಸಂಬಂಧಪಟ್ಟ ಯೋಜನೆಗಳ ಪ್ರಸ್ತಾವನೆಗಳ ಪರಿಶೀಲನ ಅನುಷ್ಠಾನ ಮೇಲ್ವಿಚಾರಣೆ.<br>3. ಈ ನಿರ್ದೇಶನಾಲಯದ ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿಕಾರಿಯಾಗಿರುತ್ತಾರೆ.<br>4. ಆಯುಕ್ತರು, ಕಾಲಕಾಲಕ್ಕೆ ನೀಡುವ ಆದೇಶಗಳನ್ನು ಜವಾಬ್ದಾರಿಗಳನ್ನು ನಿರ್ವಹಿಸುವುದು ಹಾಗೂ ನಿರ್ದೇಶನಾಲಯದ ಆಡಳಿತದ ಬಗ್ಗೆ ಸಲಹೆ ಸಹಕಾರ ನೀಡುವುದು. |
| 4. | ಆಡಳಿತಾಧಿಕಾರಿ | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, | 1. ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಮೇಲ್ವಿಚಾರಣೆ, ತಾಂತ್ರಿಕ ಹಾಗೂ ಆಡಳಿತ ಸಮನ್ವಯಾಧಿಕಾರಿ ಮತ್ತು ಆಯುಕ್ತರು |

| | | | |
|---|---|---|---|
| | | ಶಾಂತಿನಗರ, ಬೆಂಗಳೂರು-560027 | ಹಾಗೂ ಮೇಲಾಧಿಕಾರಿಗಳು ಕಾಲಕಲಕ್ಕೆ ನೀಡುವ ಆದೇಶಗಳ ಅನುಷ್ಠಾನ.<br>2. ಇವರು ಸಹಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ. |
| 5. | ಸಹಾಯಕ ನಿರ್ದೇಶಕರು | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಈ ನಿರ್ದೇಶನಾಲಯದ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ಸಾರಿಗೆ ವ್ಯವಸ್ಥೆಯ ಅನುಷ್ಠಾನ ಭೂ ಬಳಕೆ, ನಗರ ಸಾರಿಗೆ ನಕ್ಷೆಯ ತಯಾರಿ ಹಾಗೂ ವಿವಿಧ ಪ್ರಸ್ತಾವನೆಗಳ ಬಗ್ಗೆ ತಾಂತ್ರಿಕ ಪರಿಶೀಲನೆ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ವಿಶೇಷಾಧಿಕಾರಿಗೆ ಸಲ್ಲಿಸುವುದು.<br>2. ತಾಂತ್ರಿಕ ವಿಭಾಗಕ್ಕೆ ಸಂಬಂಧಿಸಿದಂತೆ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ.<br>3. ಆಯುಕ್ತರು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ |
| 6. | ಸಹಾಯಕ ನಿರ್ದೇಶಕರು-1 | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | 1. ಈ ನಿರ್ದೇಶನಾಲಯದ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ಸಾರಿಗೆ ವ್ಯವಸ್ಥೆಯ ಅನುಷ್ಠಾನ ಭೂ ಬಳಕೆ, ನಗರ ಸಾರಿಗೆ ನಕ್ಷೆಯ ತಯಾರಿ ಹಾಗೂ ವಿವಿಧ ಪ್ರಸ್ತಾವನೆಗಳ ಬಗ್ಗೆ ತಾಂತ್ರಿಕ ಪರಿಶೀಲನೆ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ವಿಶೇಷಾಧಿಕಾರಿಗೆ ಸಲ್ಲಿಸುವುದು.<br>2. ಆಯುಕ್ತರು ಕಾಲಕಾಲಕ್ಕೆ ನೀಡುವ ಆದೇಶಗಳ ಅನುಷ್ಠಾನ. |
| 7. | ಸಹಾಯಕ ಕಾರ್ಯಪಾಲಕ ಅಭಿಯಂತರರು | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿದ್ದು, ಇಲಾಖೆಯಲ್ಲಿ ಸ್ವೀಕೃತಗೊಂಡ ಸಿವಿಲ್ ಕಾಮಗಾರಿಗೆ ಸಂಬಂಧಿಸಿದ ನೀಲನಕ್ಷೆಗಳು ಮತ್ತು ಅಂದಾಜುಪಟ್ಟಿಗಳನ್ನು ನಿಯಮಕ್ಕನುಸಾರ ಪರಿಶೀಲಿಸಿ ಆಯುಕ್ತರಿಗೆ ಸೂಕ್ತ ಸಲಹೆ ಮತ್ತು ಸಹಕಾರ ನೀಡುವುದು. ವಿಷಯಗಳನ್ನು ಪರಿಶೀಲಿಸಿ ನಿರ್ಧಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು. |
| 8. | ಲೆಕ್ಕಾಧಿಕಾರಿ | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027 | ನಿರ್ದೇಶನಾಲಯಕ್ಕೆ ಸಂಬಂಧಿಸಿದ ಆಯವ್ಯಯ ನಿರ್ವಹಣೆ, ನಿರ್ದೇಶನಾಲಯದ ವಾರ್ಷಿಕ ಕಾರ್ಯನಿರ್ವಹಣೆಯ ವರದಿ ತಯಾರಿಸುವುದು. ಹಣ ಬಿಡುಗಡೆ ಮತ್ತು ಮರು ಹೊಂದಾಣಿಕೆ ಬಗ್ಗೆ ತಮ್ಮ ಅಭಿಪ್ರಾಯದೊಂದಿಗೆ ಕಡತವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. |

| | | | |
|---|---|---|---|
| 9. | ದಸ್ತಾವೇಜು ತಜ್ಞರು | ಬಿಎಂಟಿಸಿ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಬಸ್ ಸ್ಟ್ಯಾಂಡ್ ಮೇಲ್ಭಾಗ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027 | ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗುವ ಪ್ರಸ್ತಾವನೆ ನಕ್ಷೆಗಳು ಯೋಜನೆಗಳು ಹಾಗೂ ಇತರೆ ದಾಖಲೆಗಳ ನಿರ್ವಹಣೆ. |
| 10. | ಉಳಿಕೆ ಸಿಬ್ಬಂದಿಗಳ ಸೇವೆಯನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ. | | |

5. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ

- **ಆಯುಕ್ತರು:** ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಸಮಗ್ರ ಪರಿಶೀಲನೆ ನಂತರ ಸೂಚಿಸಬಹುದಾದ ನಿರ್ದಿಷ್ಟ ಅಭಿಪ್ರಾಯ ಹಾಗೂ ನಿಗದಿಪಡಿಸದಂತಹ ಆರ್ಥಿಕ ಪ್ರತ್ಯಾಯೋಜನೆ ರೀತ್ಯಾ ಆದೇಶ ನೀಡುವುದು.
- **ವಿಶೇಷಾಧಿಕಾರಿ:** ನಿರ್ದೇಶನಾಲಯದ ತಂತ್ರಿಕ ವಿಭಾಗದ ಮೇಲುಸ್ತುವಾರಿ. ವಿವಿಧ ನಗರ ಪ್ರದೇಶಗಳ ಸಾರಿಗೆ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳು ಮತ್ತು ಚಾಲ್ತಿಯಲ್ಲಿರುವ ಯೋಜನೆಗಳ ಪರಿಶೀಲನೆ ನಂತರ ಸೂಚಿಸಬಹುದಾದ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು.
- **ಜಂಟಿ ನಿರ್ದೇಶಕರು:** ಅಧೀನ ಅಧಿಕಾರಿಗಳಿಂದ ಸ್ವೀಕೃತಗೊಂಡ ಕಡತಗಳ ಸಮಗ್ರ ಪರಿಶೀಲನೆ ನಂತರ ಸೂಚಿಸಬಹುದಾದ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು. ನಿಗದಿಪಡಿಸಿದಂತಹ ಆರ್ಥಿಕ ಪ್ರತ್ಯಾ ಯೋಜನೆಯನ್ವಯ ಪತ್ರ ಅಥವಾ ಆದೇಶಗಳನ್ನು ಹೊರಡಿಸಲು ಅನುಮೋದನೆ ನೀಡುವುದು.
- **ಆಡಳಿತಾಧಿಕಾರಿ:** ನಿರ್ದೇಶನಾಲಯದ ವಿವಿಧ ಶಾಖೆಗಳಿಂದ ಬಂದಂತಹ ಕಡತಗಳಲ್ಲಿ ನಿರ್ದಿಷ್ಟ ಅಭಿಪ್ರಾಯ ಹಾಗೂ ಚಾಲ್ತಿಯಲ್ಲಿರುವ ನಿಯಮಾನುಸಾರ ಕಡತವನ್ನು ಮೇಲಾಧಿಕಾರಿಗಳಿಗೆ ಹಾಗೂ ಅವರ ಟಿಪ್ಪಣಿಗಳ ಅನುಸಾರ ಪತ್ರ ಅಥವಾ ಆದೇಶಗಳನ್ನು ಹೊರಡಿಸುವುದು.
- **ಸಹಾಯಕ ನಿರ್ದೇಶಕರು:** ನಿರ್ದೇಶನಾಲಯದ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ವಿವಿಧ ಯೋಜನೆಗಳ ನಕ್ಷೆ, ಭೂ ಬಳಕೆ, ವಿವಿಧ ಪ್ರಸ್ತಾವನೆಗಳು ಹಾಗೂ ಯೋಜನೆಗಳ ಪರಿಶೀಲನೆ ನಂತರ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಿಗೆ ಕಡತವನ್ನು ಸಲ್ಲಿಸುವುದು.
- **ಸಹಾಯಕ ಕಾರ್ಯಪಾಲಕ ಅಭಿಯಂತರರು:** ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿದ್ದು, ಇಲಾಖೆಯಲ್ಲಿ ಸ್ವೀಕೃತಗೊಂಡ ಸಿವಿಲ್ ಕಾಮಗಾರಿಗೆ ಸಂಬಂಧಿಸಿದ ನೀಲನಕ್ಷೆಗಳು ಮತ್ತು ಅಂದಾಜುಪಟ್ಟಿಗಳನ್ನು ನಿಯಮಕ್ಕನುಸಾರ ಪರಿಶೀಲಿಸಿ ಆಯುಕ್ತರಿಗೆ ಸೂಕ್ತ ಸಲಹೆ ಮತ್ತು ಸಹಕಾರ ನೀಡುವುದು. ವಿಷಯಗಳನ್ನು ಪರಿಶೀಲಿಸಿ ನಿರ್ದಿಷ್ಟ ಅಭಿಪ್ರಾಯದೊಂದಿಗೆ ಆಯುಕ್ತರ ಅನುಮೋದನೆಗೆ ಕಡತ ಸಲ್ಲಿಸುವುದು.
- **ಲೆಕ್ಕಾಧಿಕಾರಿ:** ನಿರ್ದೇಶನಾಲಯಕ್ಕೆ ಸಂಬಂಧಿಸಿದ ಆಯವ್ಯಯ ನಿರ್ವಹಣೆ, ನಿರ್ದೇಶನಾಲಯದ ವಾರ್ಷಿಕ ಕಾರ್ಯನಿರ್ವಹಣೆಯ ವರದಿ ತಯಾರಿಸುವುದು. ಹಣ ಬಿಡುಗಡೆ ಮತ್ತು ಮರು ಹೊಂದಾಣಿಕೆ ಬಗ್ಗೆ ತಮ್ಮ ಅಭಿಪ್ರಾಯದೊಂದಿಗೆ ಕಡತವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
- **ದಸ್ತಾವೇಜು ತಜ್ಞರು:** ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗುವ ಪ್ರಸ್ತಾವನೆ ನಕ್ಷೆಗಳು ಯೋಜನೆಗಳು ಹಾಗೂ ಇತರೆ ದಾಖಲೆಗಳ ನಿರ್ವಹಣೆ.

6. **ಕಾರ್ಯಗಳ ನಿರ್ವಹಣೆಗೆ ರೂಪಿಸುವ ಸೂತ್ರಗಳು**

ಕರ್ನಾಟಕ ಸರ್ಕಾರದ (ವ್ಯವಹಾರ ಹಂಚಿಕೆ) ನಿಯಮಗಳು 1977, ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) 1977 ನಿಯಮಗಳು, ಕರ್ನಾಟಕ ಸರ್ಕಾರದ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1977 ನಿಯಮಗಳಲ್ಲಿ ನಿಗದಿಪಡಿಸಿರುವ ಕಾರ್ಯಗಳು ಮತ್ತು ಮಾನದಂಡಗಳನ್ನು ಅನುಸರಿಸುವುದು.

7. ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ಅಧಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು

- KCSR– ಕರ್ನಾಟಕ ನಾಗರೀಕ ಸೇವಾ ನಿಯಮಗಳು
- KTPP– ಕರ್ನಾಟಕ ಸರ್ಕಾರದ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ–1999
- KTC– ಕರ್ನಾಟಕ ಖಜಾನೆ ಸಂಹಿತೆ
- KFC– ಕರ್ನಾಟಕ ಆರ್ಥಿಕ ಸಂಹಿತೆ
- KMA– ಕರ್ನಾಟಕ ಪುರಸಭೆಗಳ ಕಾಯ್ದೆ – 1964
- KMCE– ಕರ್ನಾಟಕ ಸಾದಿಲ್ವಾರು ವೆಚ್ಚಗಳ ಕೈಪಿಡಿ
- KTCP– ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ
- KMCA– ಕರ್ನಾಟಕ ಪುರಸಭೆ ಕಾಯ್ದೆ – 1976
- KCSR– ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು–1957
- KCSR– ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು – 1966
- KGS– ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು – 1963

8. ನಿರ್ದೇಶನಾಲಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿತ ಮತ್ತು ಅದರ ನಿಯಮಗಳಲ್ಲಿ ಉಪಬಂಧಿಸಿರುವಂತೆ ಪರ್ಯಾಯ ವ್ಯವಸ್ಥೆಯು ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ (ಸಂಬಳ):

| **ಕ್ರ. ಸಂ.** | **ಹೆಸರು ಮತ್ತು ಪದನಾಮ** | **ವೇತನಶ್ರೇಣಿ ಅಥವಾ ವೇತನ ರೂ.ಗಳಲ್ಲಿ** | **ದೂರವಾಣಿ ಸಂಖ್ಯೆ** |
|---|---|---|---|
| 1. | ವಿ. ಪೊನ್ನುರಾಜ್, ಭಾಆಸೇ<br>ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ | 144200–218200 | 080–22226627 |
| 2. | ಮುರಳಿಕೃಷ್ಣ .ಎನ್<br>(ಭಾರತ ದೂರಸಂಪರ್ಕ ಇಲಾಖೆಯಿಂದ ನಿಯೋಜನೆ)<br>ವಿಶೇಷಾಧಿಕಾರಿ | (Scale less) | 080–22226627 |
| 3. | ವೀಣಾ .ಎನ್<br>ಜಂಟಿ ನಿರ್ದೇಶಕರು | 74400–109600 | 080–22226627 |
| 4. | ವಿದ್ಯಾ .ಡಿ<br>ಆಡಳಿತಾಧಿಕಾರಿ (ಪ್ರ) | 52650–97100 | 080–22226627 |
| 5. | ವಿದ್ಯಾ .ಡಿ<br>ಸಹಾಯಕ ನಿರ್ದೇಶಕರು | | 080–22226627 |
| 6. | ಸೌಮ್ಯ .ಎಂ.ಎನ್<br>ಸಹಾಯಕ ನಿರ್ದೇಶಕರು | 52650–97100 | 080–22226627 |
| 7. | ಪ್ರಾಣೇಶ್ ಕುಮಾರ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು | 52650–97100 + PP 10,000 | 080–22226627 |
| 8. | ಖಾಲಿ | 43100–83900 | 080–22226627 |

| | | | |
|---|---|---|---|
| | ಲೆಕ್ಕಾಧಿಕಾರಿ | | |
| 9. | ಖಾಲಿ<br>ದಸ್ತಾವೇಜು ತಜ್ಞರು | 21400–42000 | 080–22226627 |
| 10. | ಉಳಿದ ಸಿಬ್ಬಂದಿ ವರ್ಗದ ಸೇವೆಯನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ. | | 080–22226627 |

9. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಹೆ ಹಂಚಿಕೆ ಮಾಡಲಾದ ಆಯವ್ಯಯ:

**2018–19ನೇ ಸಾಲಿನ ಆಯವ್ಯಯ ಯೋಜನೆ ಮತ್ತು ಲೆಕ್ಕ ಶೀರ್ಷಿಕೆ**

| ಕ್ರ. ಸಂ. | ಲೆಕ್ಕಶೀರ್ಷಿಕೆ | ವಾಸ್ತವಿಕ (Actuals) | | | | 2018–19 | |
|---|---|---|---|---|---|---|---|
| | | 2014–15 | 2015–16 | 2016–17 | 2017–18 | ಆಯವ್ಯಯ | ವೆಚ್ಚ |
| 1. | ನಗರ ಭೂ ಸಾರಿಗೆ ನಿರ್ದೇಶನಾಲಯ 2217–80–001–1–05 | 6.63 | 8.00 | 7.63 | 7.07 | 807.00 | 726.00 |
| 2. | ರಾಜ್ಯ ನಗರ ಸಾರಿಗೆ ನಿಧಿ 4217–60–800–6–01 | 51.55 | 57.00 | 60.90 | 74.72 | 81.39 | 61.00 |
| 3. | ರಾಜ್ಯ ನಗರ ಸಾರಿಗೆ ನಿಧಿ 2217–05–800–0–06 | – | 1.00 | 3.00 | 2.74 | 1.00 | 73.00 |
| 4. | ಹುಬ್ಬಳ್ಳಿ–ಧಾರವಾಡ ತ್ವರಿತ ಬಸ್ ಸಂಚಾರ ಯೋಜನೆ 4217–60–800–01–01 | 150.00 | 150.00 | 150.00 | 329.00 | – | – |
| 5. | ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆ 4217–60–800–0–03 | – | 6.00 | 4.40 | 1.10 | 10.00 | – |
| 6. | OTACA 4217–60–800–0–02 | 15 | – | – | – | – | – |
| 7. | ಬೆಂಗಳೂರು ಉಪನಗರ ರೈಲು ಸ್ಥಾಪನೆ 4217–60–800–0–04 | – | – | 24.00 | 24.00 | 90.00 | – |

**10. ಹುಬ್ಬಳ್ಳಿ–ಧಾರವಾಡ ತ್ವರಿತ ಬಸ್ ಸಾರಿಗೆ ವ್ಯವಸ್ಥೆ ಯೋಜನೆ:**

ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ತ್ವರಿತ ಬಸ್ ಸಾರಿಗೆ ವ್ಯವಸ್ಥೆಯ ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ನಗರ ಭೂ ಸಾರಿಗೆ ಇಲಾಖೆಯು ಹೊಂದಿದೆ.

ತ್ವರಿತ ಬಸ್ ಸಾರಿಗೆ ವ್ಯವಸ್ಥೆಯು ಹುಬ್ಬಳ್ಳಿ–ಧಾರವಾಡ ನಗರದಲ್ಲಿರುವ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ. ತ್ವರಿತ ಬಸ್ ಸಾರಿಗೆ ಕಾರಿಡಾರ್ ಉದ್ದ

22.25 ಕಿ.ಮೀ. ಇದ್ದು, ಮದ್ಯ ಭಾಗದಲ್ಲಿ ಬಸ್‌ಗಳ ಸಂಚಾರಕ್ಕಾಗಿ ಪ್ರತ್ಯೇಕ ಲೇನುಗಳನ್ನು ಒದಗಿಸಿದ್ದು, 31 ಬಸ್ ನಿಲ್ದಾಣಗಳು, ಬಾಹ್ಯ ಟಿಕೇಟ್ ನೀಡುವ ವ್ಯವಸ್ಥೆ, ಇಂಟಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್, 2 ಬಸ್ ಡಿಪೋಗಳು, 1 ಕಾರ್ಯಗಾರ, 2 ಟರ್ಮಿನಲ್ ಮತ್ತು ಒಂದು ಪ್ರಾದೇಶಿಕ ಇಂಟರ್‌ಚೇಂಜ್, ಸಂಪರ್ಕ ವ್ಯವಸ್ಥೆಗಳನ್ನು ಒಳಗೊಂಡಿದೆ. ಈ ಕಾರಿಡಾರ್ ವ್ಯವಸ್ಥೆಯಲ್ಲಿ ಬಿಆರ್‌ಟಿಎಸ್ ಬಸ್ಸುಗಳನ್ನು ಹೊರತು ಪಡಿಸಿ, ಬೇರಾವುದೇ ಬಸ್ ಓಡಾಡುವ ಅನುಮತಿ ಇರುವುದಿಲ್ಲ. ಭೂಸ್ವಾಧೀನಕ್ಕಾಗಿ ಇರುವ 72 ಎಕರೆ 29 ಗುಂಟೆ ಭೂಮಿಯ ಪೈಕಿ ಈಗಾಗಲೇ 72 ಎಕರೆ 08 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಬಾಕಿ 21 ಗುಂಟೆ ಭೂಮಿಯ ಸ್ವಾಧೀನ ಪ್ರಗತಿಯಲ್ಲಿದೆ.

ಈ ಯೋಜನೆಯನ್ನು 24 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿದ್ದು, ಎಲ್ಲಾ ಪ್ಯಾಕೇಜ್‌ಗಳ ಕೆಲಸಗಳನ್ನು ವಿವಿಧ ಸಂಸ್ಥೆಗಳಿಗೆ ನೀಡಲಾಗಿದ್ದು, ಬಹುತೇಕ ಕಾಮಗಾರಿಗಳು ಮುಕ್ತಾಯವಾಗಿದ್ದು, 2ನೇ ಅಕ್ಟೋಬರ್ 2018ರಿಂದ ಪ್ರಾಯೋಗಿಕವಾಗಿ ಬಸ್ಸುಗಳನ್ನು ಓಡಿಸಲು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಪ್ರತಿದಿನ ಸರಾಸರಿ 60000 ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. ಈ ಯೋಜನೆಗೆ ಒಟ್ಟು 100 ಹವಾನಿಯಂತ್ರಿತ ಮಾದರಿಯ ಬಸ್ಸುಗಳನ್ನು ಖರೀದಿಸಲಾಗಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ.929.00 ಕೋಟಿ ಆಗಿದ್ದು, ಅದರಲ್ಲಿ ವಿಶ್ವ ಬ್ಯಾಂಕ್‌ನ ನೆರವು ರೂ.359.00 (ಸಾಲ+ಅನುದಾನ) ಆಗಿರುತ್ತದೆ.

ಈ ಯೋಜನೆಯ ಇತರೆ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| | | |
|---|---|---|
| ಯೋಜನೆಯ ಪ್ರಾರಂಭದ ದಿನಾಂಕ | 20.03.2013 | |
| ಯೋಜನೆಯ ಮುಕ್ತಾಯ ದಿನಾಂಕ | 31.03.2018 | |
| ಮೂಲ ಅಂದಾಜು ಒಟ್ಟು<br>ರಾಜ್ಯ ಸರ್ಕಾರ<br>ಐ.ಬಿ.ಆರ್.ಡಿ ಸಾಲ<br>ಜಿ.ಇ.ಎಫ್ ಅನುದಾನ | ರೂ. 705.00 ಕೋಟಿಗಳು<br>ರೂ. 401.00 ಕೋಟಿಗಳು<br>ರೂ.291.00 ಕೋಟಿಗಳು (55 ಮಿಲಿಯನ್ USD)<br>ರೂ.13.00 ಕೋಟಿಗಳು 2.5 ಮಿಲಿಯನ್ USD) | |
| ಪರಿಷ್ಕೃತ ಅಂದಾಜು | ರೂ. 904.41 ಕೋಟಿಗಳು | |
| ಆಯವ್ಯಯ ಹಂಚಿಕೆ | 2013–14 | ರೂ. 75.00 ಕೋಟಿ |
| | 2014–15 | ರೂ. 150.00 ಕೋಟಿ |
| | 2015–16 | ರೂ. 150.00 ಕೋಟಿ |
| | 2016–17 | ರೂ. 150.00 ಕೋಟಿ |
| | 2017–18 | ರೂ. 250.00 ಕೋಟಿ |
| | **ಒಟ್ಟು** | **ರೂ. 775.00 ಕೋಟಿ** |
| ವೆಚ್ಚ (ಡಿಸೆಂಬರ್ 2017ರ ಅಂತ್ಯದವರೆಗೆ) | | ರೂ. 650.00 ಕೋಟಿ |
| ಹಿಂಪಾವತಿ (ಭಾಹ್ಯ ನೆರವು) | | ರೂ. 171.00 ಕೋಟಿ |

ಯೋಜನಾ ವೆಚ್ಚ 904.41 ಕೋಟಿ + 24.59 ಕೋಟಿ ಜಿಇಎಫ್ ಅನುದಾನ ರೂ.ಗಳಿಗೆ ಪರಿಷ್ಕೃತವಾಗಿದ್ದು, ಹೆಚ್ಚುವರಿಯಾಗಿ 123 ಕೋಟಿ ರೂಪಾಯಿಗಳನ್ನು ಒದಗಿಸಬೇಕಿದ್ದು, ಇದನ್ನು 2017–18ನೇ ಸಾಲಿನಲ್ಲಿ 89 ಕೋಟಿ ರೂಪಾಯಿಗಳನ್ನು ಪೂರಕ ಆಯವ್ಯಯದಲ್ಲಿ ಒದಗಿಸಿಕೊಡಲು ಹಾಗೂ ಇನ್ನುಳಿದ 34 ಕೋಟಿ ರೂಪಾಯಿಗಳನ್ನು ಮುಂದಿನ ಸಾಲಿನಲ್ಲಿ ಅಂದರೆ 2018–19ನೇ ಸಾಲಿಗೆ ಒದಗಿಸಿಕೊಡಲು ಅನುಮೋದನೆಗಾಗಿ ಪ್ರಸ್ತಾವಿಸಿದೆ.

### 11. ಬೆಂಗಳೂರು ಉಪನಗರ ರೈಲು ಯೋಜನೆ (ಹಂತ–1ಎ)

ದಿನಾಂಕ: 06.03.2017ರಲ್ಲಿ ಕರ್ನಾಟಕ ಸರ್ಕಾರವು ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ. ನಅಇ 33 ಪಿಆರ್‌ಜೆ 2017ರಲ್ಲಿ ಬೆಂಗಳೂರು ಉಪನಗರ ರೈಲು ವ್ಯವಸ್ಥೆ ಯೋಜನೆಯನ್ನು ಹಂತವಾರು ಅನುಷ್ಠಾನಗೊಳಿಸಲು ಹಾಗೂ ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯಗಳ ನಡುವೆ ಶೇಕಡ 80:20ರ ಅನುಪಾತದಲ್ಲಿ ಒಟ್ಟು 345 ಕೋಟಿ ವೆಚ್ಚದ ಒಡಂಬಡಿಕೆಯಲ್ಲಿ ಗುರುತಿಸಲಾದ ಕಾಮಗಾರಿಗಳನ್ನು ಅಂದರೆ

15 ಜೋಡಿ ಸಾಂಪ್ರದಾಯಿಕ ಟ್ರೈನುಗಳನ್ನು ಮೆಮು ಟ್ರೈನುಗಳನ್ನಾಗಿ ಪರಿವರ್ತಿಸಲು ಮತ್ತು ಬಾಣಸವಾಡಿಯಲ್ಲಿ ಮೆಮು ನಿರ್ವಹಣಾ ಸೌಕರ್ಯ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿರುತ್ತದೆ. ಅಂತೆಯೆ, ನೈಋುತ್ಯ ರೈಲ್ವೆಯು ಮೆಮು ರೇಕುಗಳ 16 ಘಟಕಗಳನ್ನು ಖರೀದಿಸಿ 6 ಜೋಡಿ ಟ್ರೈನ್‌ಗಳನ್ನು ಪರಿವರ್ತಿಸಿರುತ್ತಾರೆ. ರಾಜ್ಯ ಸರ್ಕಾರವು ಈವರೆವಿಗೆ ನೈಋುತ್ಯ ರೈಲ್ವೆಗೆ ರೂ. 100 ಕೋಟಿ ರಾಜ್ಯ ಪಾಲಿನ ಹಣವನ್ನು ಬಿಡುಗಡೆ ಮಾಡಿರುತ್ತದೆ.

ರಾಜ್ಯದ ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ – ಕರ್ನಾಟಕ (K-RIDE) ಇದು ರೈಲ್ವೆ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿಯಾಗಿದ್ದು ಇದರ ಅಧೀನದ ಅಂಗ ಸಂಸ್ಥೆಯಾಗಿ ವಿಶೇಷ ಉದ್ದೇಶ ವಾಹಕ (SPV) ವನ್ನು ಸ್ಥಾಪಿಸಲು K-RIDE ನ ಮಂಡಳಿಯು ಅನುಮೋದಿಸಿದ್ದು, SPV ಯ ಸ್ಥಾಪನಾ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಈ ನಡುವೆಯೆ ದ್ವಿತೀಯ ಭಾಗದ ಯೋಜನೆಗಳನ್ನು ರೈಲ್ವೆ ಮಂತ್ರಾಲಯವು ವಿಶೇಷ ಉದ್ದೇಶ ವಾಹಕದ (SPV)ಮೂಲಕ ಅನುಷ್ಠಾನಗೊಳಿಸಲಾಗುವ ಆದ್ಯತೆ ಯೋಜನೆಗಳನ್ನು ಗುರುತಿಸಿರುತ್ತದೆ. ಅಂತೆಯೆ, ಕರ್ನಾಟಕ ಸರ್ಕಾರವು ರೈಲ್ವೆಯವರು ಗುರುತಿಸಿರುವ ಯೋಜನೆಗಳ ಒಟ್ಟು ಮೊತ್ತ ರೂ. 1745 ಕೋಟಿಗೆ ಅನುಮತಿ ನೀಡಿ ದಿನಾಂಕ: 02.03.2018ರ ಸರ್ಕಾರದ ಆದೇಶ ಸಂಖ್ಯೆ. ನಅಇ 30 ಪಿಆರ್‌ಜೆ 2018ರಲ್ಲಿ ಆದೇಶ ಹೊರಡಿಸಿದೆ.

ತರುವಾಯದಲ್ಲಿ, ನೈಋುತ್ಯ ರೈಲ್ವೆಯವರು ಪತ್ರ ಸಂಖ್ಯೆ. 2018/Proj/BNC/1/12 ದಿನಾಂಕ: 06.12.2018ರಲ್ಲಿ ರಸ್ತೆ ಮತ್ತು ರೈಲು ಸೇತುವೆ ಒಳಗೊಂಡ ಮೀಸಲು ಬೆಂಗಳೂರು ಉಪನಗರ ರೈಲು ಕಾರಿಡಾರುಗಳ ಕುರಿತಂತೆ ನೈಋುತ್ಯ ರೈಲ್ವೆಯವರು ಮೆ. ರೈಟ್ಸ್ ಮೂಲಕ ತಯಾರಿಸಿದ ಕರಡು ಕಾರ್ಯಸಾಧ್ಯತಾ ಅಧ್ಯಯನದ ವರದಿಯನ್ನು ಒಪ್ಪಿಸಿರುತ್ತಾರೆ. ಮೆ. ರೈಟ್ಸ್‌ರವರು ಬೆಂಗಳೂರಿನಲ್ಲಿ ಮೀಸಲು ಉಪನಗರ ರೈಲು ಸೇವೆಗಳನ್ನು ಚಾಲನೆಗೆ ತರುವ ಕಾರ್ಯಸಾಧ್ಯತೆ ಬಗ್ಗೆ ಅಧ್ಯಯನ ನಡೆಸಿರುತ್ತಾರೆ. ನೈಋುತ್ಯ ರೈಲ್ವೆಯು ಸದರಿ ವರದಿಯ ಮೇಲೆ ಕರ್ನಾಟಕ ಸರ್ಕಾರದ ಅಭಿಪ್ರಾಯಗಳನ್ನು ಮತ್ತು ಪ್ರಸ್ತಾವಿತ ಯೋಜನೆಯ ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರದ ಅನುಮೋದನೆಯನ್ನು ಕೋರಿದೆ.

ಈ ಅಧ್ಯಯನ ವರದಿಯ ಪ್ರಮುಖ ಅಂಶಗಳು ಈ ಕೆಳಗಿನಂತಿದೆ:

i) ಅಧ್ಯಯನ ಪ್ರದೇಶವು ಬೆಂಗಳೂರು ಮಹಾನಗರ ಪ್ರದೇಶ (BMA) ದಲ್ಲಿ ವಿಸ್ತೀರ್ಣ 1306.1 ಚದರ ಅಡಿ ಹೊಂದಿದ್ದು (BMICAPA ನ ಭಾಗಶಃ 65.31 ಚದರ ಅಡಿ ಪ್ರದೇಶ ಸೇರಿದಂತೆ) ಮತ್ತು ಬೆಂಗಳೂರು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ (BIAPAA) ಸುತ್ತಮುತ್ತಲಿನ ಪ್ರದೇಶವು ಸೇರಿರುತ್ತದೆ. BIAPAA ಸುತ್ತಮುತ್ತಲಿನ ಪ್ರದೇಶವನ್ನು ಅಧ್ಯಯನದ ಪ್ರದೇಶದಲ್ಲಿ ಸೇರಿಸಿಕೊಂಡಿರುವುದು ಮುಖ್ಯವಾಗಿ ಬೆಂಗಳೂರು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾರ್ವಜನಿಕ ಸಾರಿಗೆ ಕಾರಿಡಾರುಗಳು ಸಂಪರ್ಕ ಕಲ್ಪಿಸುತ್ತಿರುವುದರಿಂದಾಗಿ ಮತ್ತು BIAPAA ಮಾಸ್ಟರ್ ಪ್ಲಾನ್‌ನಡಿ ಹಲವು ಸ್ಥಳಗಳಲ್ಲಿ ಪ್ರಸ್ತಾವಿತ ಅಭಿವೃದ್ಧಿ ಕಾರ್ಯಗಳನ್ನು ಪಟ್ಟಿ ಮಾಡಿರುವುದರಿಂದ ಆಗಿರುತ್ತದೆ. ಸದರಿ ಅಧ್ಯಯನದಲ್ಲಿ 2041ನ್ನು ಕ್ಷಿತಿಜ ವರ್ಷವೆಂದು ತೆಗೆದುಕೊಳ್ಳಲಾಗಿರುತ್ತದೆ. ಬೆಂಗಳೂರು ಹೊರ ವಲಯದಿಂದ ಬರುವ ಸಂಚಾರದ ಪರಿಣಾಮ ಮತ್ತು ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯ ಉಪಯುಕ್ತತೆಯನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ.

ii) ಅಧ್ಯಯನದ ಕಾರಿಡಾರುಗಳಲ್ಲಿ 2025, 2031 ಮತ್ತು 2041ನೇ ವರ್ಷಗಳಲ್ಲಿ ಅನುಕ್ರಮವಾಗಿ 9.28 ಲಕ್ಷ ಪ್ರಯಾಣಿಕ ಟ್ರಿಪ್‌ಗಳು, 12.41 ಲಕ್ಷ ಪ್ರಯಾಣಿಕ ಟ್ರಿಪ್ಸ್ ಮತ್ತು 16.83 ಲಕ್ಷ ಪ್ರಯಾಣಿಕ ಟ್ರಿಪ್ಸ್‌ಗಳಾಗಿರುತ್ತದೆಯೆಂದು ಅಂದಾಜಿಸಲಾಗಿದೆ.

iii) ಪ್ರಸ್ತಾವಿತ ಜೋಡಣೆ ಮತ್ತು ನಾಲ್ಕು ಕಾರಿಡಾರುಗಳಲ್ಲಿ 81 ನಿಲ್ದಾಣಗಳ ಜೊತೆಗೆ 160.50 ಕಿ.ಮೀಗಳ ಮಾರ್ಗ ಉದ್ದದ ವಿವರಗಳು ಈ ಕೆಳಗಿನಂತಿದೆ.

ಅ) **ಕಾರಿಡಾರ್–1:** ಕೆಂಗೇರಿ–ಕೆಎಸ್‌ಆರ್ ಬೆಂಗಳೂರು–ಬೆಂಗಳೂರು ಕಂಟೋನ್ಮೆಂಟ್–ಬೈಯಪ್ಪನಹಳ್ಳಿ– ಕೃಷ್ಣರಾಜಪುರಂ – ವೈಟ್‌ಫೀಲ್ಡ್ ಒಟ್ಟು ಮಾರ್ಗದ ಉದ್ದ 35.47 ಕಿ.ಮೀಗಳು.

ಆ) **ಕಾರಿಡಾರ್–2:** ಕೆಎಸ್‌ಆರ್ ಬೆಂಗಳೂರು – ಯಶವಂತಪುರ – ಲೊಟ್ಟೆಗೊಲ್ಲಹಳ್ಳಿ – ಕೊಡಿಗೇಹಳ್ಳಿ – ಯಲಹಂಕ – ರಾಜಾನುಕುಂಟೆ ಒಟ್ಟು ಮಾರ್ಗದ ಉದ್ದ 24.88 ಕಿ.ಮೀಗಳು

ಇ) **ಕಾರಿಡಾರ್–3:** ನೆಲಮಂಗಲ – ಚಿಕ್ಕಬಾಣಾವರ – ಯಶವಂತಪುರ/ಮತ್ತೀಕೆರೆ – ಲೊಟ್ಟೆಗೊಲ್ಲಹಳ್ಳಿ – ಹೆಬ್ಬಾಳ – ಬಾಣಸವಾಡಿ – ಬೈಯಪ್ಪನಹಳ್ಳಿ ಒಟ್ಟು ಮಾರ್ಗದ ಉದ್ದ 38.94 ಕಿ.ಮೀ.

ಈ) **ಕಾರಿಡಾರ್–4:** ಹೀಲಲಿಗೆ – ಬೈಯಪ್ಪನಹಳ್ಳಿ – ಚನ್ನಸಂದ್ರ – ಯಲಹಂಕ – ದೇವನಹಳ್ಳಿ ಒಟ್ಟು ಮಾರ್ಗದ ಉದ್ದ 61.36 ಕಿ.ಮೀಗಳು.

ಸರ್ಕಾರದ ಆದೇಶ ಸಂ:ಯುಡಿಡಿ 06 ಪಿಆರ್‌ಜೆ 2019 ದಿನಾಂಕ 26.02.2019ರಲ್ಲಿ ಬೆಂಗಳೂರು ನಗರಕ್ಕಾಗಿ ಮೀಸಲಾದ 161 ಕಿ.ಮೀ. ಉದ್ದದ ಬೆಂಗಳೂರು ಉಪನಗರ ರೈಲು ಮಾರ್ಗವನ್ನು ರೂ.23,093/– ಕೋಟಿ ಅಂದಾಜು ವೆಚ್ಚದಲ್ಲಿ ತಯಾರಿಸಬೇಕಾದ ಕಾರ್ಯಸಾಧ್ತಾ ವರದಿಯನ್ನು ಪಡೆಯಲು ತತ್ವಶಃ ತನ್ನ ಒಪ್ಪಿಗೆಯನ್ನು ಕರ್ನಾಟಕ ಸರ್ಕಾರವು ನೀಡಿದೆ.

**12. ಮೈಸೂರು ನಗರ ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆ ಕುರಿತು.**

ಮೈಸೂರು ನಗರ ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆ ಕುರಿತು ಮೈಸೂರು ನಿವಾಸಿಗಳಿಗೆ ಹಾಗೂ ಪ್ರವಾಸಿಗರಿಗೆ ಮೈಸೂರು ನಗರ ನಿಗಮವು ಪರಿಸರ ಸ್ನೇಹಿ, ಕಡಿಮೆ ವೆಚ್ಚದ ಸಾರಿಗೆ ವ್ಯವಸ್ಥೆಯನ್ನು ನಗರದಾದ್ಯಂತ ಇರುವ ಡಾಕಿಂಗ್ ತಾಣಗಳಲ್ಲಿರುವ ಸೈಕಲ್‌ಗಳ ಜಾಲಗಳ ಮುಖಾಂತರ ಒದಗಿಸಿದೆ. ಬಳಕೆದಾರರು, ಒಂದು ಡಾಕಿಂಗ್ ತಾಣದಲ್ಲಿ ಸೈಕಲ್ ಪಡೆದು ಇನ್ನೊಂದು ತಾಣದಲ್ಲಿ ಹಿಂದಿರುಗಿಸಬಹುದಾಗಿದೆ. ನಗರ ಭೂ ಸಾರಿಗೆ ನಿರ್ದೇಶನಾಲಯವು ಮೈಸೂರು ನಗರಕ್ಕೆ ಬೇಕಾದ ವ್ಯವಸ್ಥೆಯನ್ನು ತಯಾರಿಸಿದ್ದು, ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ನೋಡಲ್ ಏಜೆನ್ಸಿಯಾಗಿದೆ. ಈ ಯೋಜನೆಯು, ವಿಶ್ವ ಬ್ಯಾಂಕಿನಿಂದ, ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ಭಾಗಶಃ ಧನಸಹಾಯವನ್ನು ಪಡೆಯುತ್ತಿದ್ದು, ಉಳಿದ ನಿಧಿಯನ್ನು ಕಾರ್ಯಾಚರಣೆಗಾರರು 5.5 ವರ್ಷಗಳ ಅವಧಿಯಲ್ಲಿ ಭರಿಸಲಿದ್ದಾರೆ.

| | |
|---|---|
| ಯೋಜನೆ ಪ್ರಾರಂಭವಾದ ದಿನಾಂಕ | 07–01–2016 |
| ಯೋಜನೆ ಮುಕ್ತಾಯದ ದಿನಾಂಕ | 04–07–2017 |
| ಮೂಲ ಅಂದಾಜು | ರೂ. 19.03 ಕೋಟಿಗಳು |
| ಪರಿಷ್ಕೃತ ಅಂದಾಜು | ರೂ. 20.52 ಕೋಟಿಗಳು |
| ವೆಚ್ಚ | 2015–16 ರೂ. 077 ಕೋಟಿಗಳು |
| | 2016–17 ರೂ. 4.63 ಕೋಟಿಗಳು |
| | 2017–18 ರೂ. 5.11 ಕೋಟಿಗಳು |

ಮೈಸೂರು ಸಾರ್ವಜನಿಕ ಸೈಕಲ್ ಬಳಕೆ ವ್ಯವಸ್ಥೆಯನ್ನು "ಟ್ರಿನ್ ಟ್ರಿನ್" ಹೆಮ್ಮೆಯ ಸವಾರಿ" ಎಂದು ಹೆಸರಿಸಲಾಗಿದೆ. ಮೈಸೂರು ನಗರವು ಭಾರತದಲ್ಲಿ ಸ್ವಂಚಾಲಿತ ಸಾರ್ವಜನಿಕ ಸೈಕಲ್ ಬಳಕೆ ವ್ಯವಸ್ಥೆಯನ್ನು ಪಡೆದ ಪ್ರಥಮ ನಗರವೆಂಬ ಹೆಗ್ಗಳಿಕೆ ಪಡೆದಿದೆ. ಈ ವ್ಯವಸ್ಥೆಯು, ಮೈಸೂರಿನ ಒಟ್ಟು 128 ಚ.ಕಿ.ಮೀ. ವಿಸ್ತೀರ್ಣದಲ್ಲಿ 28 ಚ.ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ 52 ಡಾಕಿಂಗ್ ನಿಲ್ದಾಣಗಳು ಮತ್ತು 450 ಬೈಸೈಕಲ್‌ಗಳೊಂದಿಗೆ ಅನುಷ್ಠಾನಗೊಳ್ಳುತ್ತಿದೆ. ಈ ವ್ಯವಸ್ಥೆಯನ್ನು ನಿಯಂತ್ರಿಸಲು ನಿಯಂತ್ರಣ ಕೇಂದ್ರವನ್ನು

ಸ್ಥಾಪಿಸಲಾಗಿದೆ. ಬಳಕೆದಾರರು, ಸೈಕಲ್‌ಗಳನ್ನು ಸ್ಮಾರ್ಟ್ ಕಾರ್ಡು ಇಲ್ಲವೆ, ಮೊಬೈಲ್ ಆ್ಯಪ್ ಮುಖಾಂತರ ಬಳಸಬಹುದು.

ಈ "ಟ್ರಿನ್ ಟ್ರಿನ್" ವ್ಯವಸ್ಥೆಯನ್ನು ಮಾನ್ಯ ಮುಖ್ಯ ಮಂತ್ರಿರವರು ದಿನಾಂಕ 04-06-2017ರಂದು ಉದ್ಘಾಟಿಸಿದ್ದು, ಅಲ್ಲಿಂದ ದಿನಾಂಕ 15-03-2019ರವರೆಗೆ ಈ ವ್ಯವಸ್ಥೆಯಲ್ಲಿ 11000ಕ್ಕಿಂತ ಹೆಚ್ಚು ನೊಂದಾಯಿತ ಬಳಕೆದಾರರಿದ್ದಾರೆ. ಈ ವ್ಯವಸ್ಥೆಯನ್ನು ಮೈಸೂರು ನಿವಾಸಿಗಳು ಹೆಮ್ಮೆಯಿಂದ ಅಪ್ಪಿಕೊಂಡಿದ್ದು, ಪ್ರತಿದಿನ 1000-1200 ಬಳಕೆದಾರರು ಬಳಸುತ್ತಿದ್ದಾರೆ.

**13. ಬೆಂಗಳೂರು ನಗರ ಸಾರ್ವಜನಿಕ ಬೈಸಿಕಲ್ ಬಳಕೆ ಕುರಿತು:-**

ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆಯನ್ನು ಬೆಂಗಳೂರಿನ ಕೆಲವು ಭಾಗಗಳಲ್ಲಿ ಅನುಷ್ಠಾನಗೊಳಿಸಲು ನಗರ ಭೂ ಸಾರಿಗೆ ನಿರ್ದೇಶನಾಲಯವು ಪ್ರಸ್ತಾವನೆಯನ್ನು ತಯಾರಿಸಿದೆ. ಈ ವ್ಯವಸ್ಥೆಯನ್ನು ಮೊದಲು ಹೆಚ್‌ಎಸ್‌ಆರ್ ಬಡಾವಣೆ, ಕೋರಮಂಗಲ, ಇಂದಿರಾನಗರ ಸಿಬಿಡಿ ಪ್ರದೇಶ ಮತ್ತು ವಿಧಾನ ಸೌಧದ ಸುತ್ತಲಿನ ಪ್ರದೇಶಗಳಲ್ಲಿ ಒಟ್ಟು 384 ಪಾರ್ಕಿಂಗ್ ಹಬ್ಬುಗಳು ಹಾಗೂ 6000 ಸೈಕಲ್‌ಗಳೊಂದಿಗೆ ಅಳವಡಿಸಲಾಗುವುದು. ಬೆಂಗಳೂರು ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆಯು, 4ನೇ ತಲೆಮಾರಿನ ಡಾಕಿಂಗ್ ನಿಲ್ದಾಣ ರಹಿತ ವ್ಯವಸ್ಥೆಯಾಗಿದ್ದು, ಇದರಲ್ಲಿ ಬಹು ಸಾರ್ವಜನಿಕ ಸೈಕಲ್ ಬಳಕೆದಾರರ ನಿರ್ವಾಹಕರು ಅವರದೇ ಆದ ವೆಚ್ಚದೊಂದಿಗೆ ಕಾರ್ಯಾಚಾರಣೆ ಮಾಡುತ್ತಾರೆ.

ಸರ್ಕಾರದ ಅದೇಶ ಸಂ: ನಅಇ 237 ಪಿಆರ್‌ಜೆ 2017 ಬೆಂಗಳೂರು ದಿನಾಂಕ 20-01-2018ರಲ್ಲಿ, ಸಚಿವ ಸಂಪುಟದ ಅನುಮೋದನೆಯನ್ನು ದಿನಾಂಕ 02-01-2018ರಲ್ಲಿ ಪಡೆದು, ಸರ್ಕಾರದ ಅನುಮೋದನೆ ನೀಡಿದೆ. ನಂತರ ಅರ್ಹ ಕಾರ್ಯಾಚರಣೆಗಾರರನ್ನು ಆಯ್ಕೆ ಮಾಡಲು, ಆಸಕ್ತಿಯನ್ನು ವ್ಯಕ್ತಪಡಿಸಲು ಜನವರಿ-18ರಲ್ಲಿ ಕೋರಿ ಒಟ್ಟು 4 ಅರ್ಹ ಕಾರ್ಯಾಚರಣೆಗಾರರಿಗೆ, ಕಾರ್ಯಾಚರಣೆ ಮಾಡಲು, ರಹದಾರಿ ನೀಡಲಾಯಿತು.

ಈ ಯೋಜನೆಯನ್ನು ಕರ್ನಾಟಕ ಮಾನ್ಯ ಮುಖ್ಯ ಮಂತ್ರಿರವರು ದಿನಾಂಕ 04-03-2019ರಂದು ಉದ್ಘಾಟನೆ ಮಾಡಿದರು. ಪ್ರಸ್ತುತ ಈ ಯೋಜನೆಯಲ್ಲಿ ಒಟ್ಟು 3000 ಸೈಕಲ್‌ಗಳು ಪಾರ್ಕಿಂಗ್ ಹಬ್ಬುಗಳಲ್ಲಿ ಬಳಕೆಗೆ ಲಭ್ಯವಿದೆ. ನಂತರದ ದಿನಗಳಲ್ಲಿ ಈ ಯೋಜನೆಗೆ ನಗರದ ಇತರ ಪ್ರದೇಶಗಳಿಗೆ ವಿಸ್ತರಣೆ ಆಗುವ ನಿರೀಕ್ಷೆಯಿದೆ.

**14. ರಾಜ್ಯ ನಗರ ಸಾರಿಗೆ ನಿಧಿ:-**

ಈ ನಿಧಿಯನ್ನು ಕರ್ನಾಟಕದ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅಳವಡಿಸಲು ಸಹಾಯ, ನಗರಗಳಲ್ಲಿ ಸಾರಿಗೆ ಮೂಲ ಸೌಕರ್ಯಗಳನ್ನು ರಚನೆ ಮಾಡಲು ಸಹಾಯ ಮಾಡಲಾಗಿದೆ. 2011-12ನೇ ಸಾಲಿನಿಂದ ಇಲ್ಲಿಯವರೆಗೆ ನಿಧಿಯಲ್ಲಿ ಒದಗಿಸಿದ ರೂ.293.40 ಕೋಟಿಗಳಲ್ಲಿ ರೂ. 248.80 ಕೋಟಿಗಳನ್ನು ಅನುಷ್ಠಾನಗೊಳಿಸಲು ಬಿಡುಗಡೆಗೊಳಿಸಲಾಗಿದೆ. ನಗರ ಸಾರಿಗೆ ನಿಧಿಯನ್ನು ಎರಡನೇ ಸ್ಥರದ ನಗರಗಳಲ್ಲಿ ನಗರ ಬಸ್ ಸೇವೆಯನ್ನು ಪರಿಚಯಿಸಲು ಮತ್ತು ಬಲಗೊಳಿಸಲು ಬಳಸಿಕೊಳ್ಳಲಾಗಿದೆ. ತುಮಕೂರು, ಹಾಸನ, ದಾವಣೆಗೆರೆ, ಮಂಡ್ಯ, ಗದಗ-ಬೆಟಗೇರಿ, ಗುಲ್ಬರ್ಗ ಮತ್ತು ಇತರೆ ನಗರಗಳಲ್ಲಿ ನಗರ ಬಸ್ ಸೇವೆಯು ಹೆಚ್ಚು ಜನಪ್ರಿಯವಾಗಿದ್ದು, ಇದು ಚಿಕ್ಕ ನಗರಗಳಲ್ಲೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ಬಹುಮುಖ್ಯವಾದ ಅಂಶವೆಂದು ತೋರಿಸುತ್ತದೆ. ನಗರ ಭೂ ಸಾರಿಗೆ ನಿರ್ದೇಶನಾಲಯವು ತುಮಕೂರು, ದಾವಣೆಗೆರೆ, ಹಾಸನ, ಮಂಡ್ಯ, ಕೆ.ಜಿ.ಎಫ್, ಕೋಲಾರಗಳಲ್ಲಿ ನಗರ ಬಸ್ ಸೇವೆಯ ಸಮೀಕ್ಷೆ ಕೈಗೊಂಡಿತ್ತು. ನಗರ ಬಸ್ ಸೇವೆಯಿಂದ ಪ್ರಯಾಣಿಕರ ಪ್ರಯಾಣ ವೆಚ್ಚವು ಕಡಿಮೆಗೊಂಡಿದ್ದು, ಹಣದ ಉಳಿತಾಯವಾಗುತ್ತಿದೆಂದು

ಸಮೀಕ್ಷೆಯಿಂದ ತಿಳಿದು ಬಂದಿತ್ತು. ಹಾಸನ ನಗರ ಬಸ್ ಸೇವೆಯು ಅನುಷ್ಠಾನಗೊಂಡ ಬಹಳ ಕಡಿಮೆ ಸಮಯದಲ್ಲಿ ಲಾಭ ಕಂಡಿರುವುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಬೀದರ್, ಯಾದಗಿರ್, ಬಿಜಾಪುರ, ಬಳ್ಳಾರಿ ನಗರ ಬಸ್ ಸೇವೆಗಳು ಭಾಗಶಃ ನಗರ ಸಾರಿಗೆ ನಿಧಿಯಿಂದ ಅನುದಾನ ಮಾಡಲಾಗಿದೆ.

ಪ್ರಸಕ್ತ 2018–19ನೇ ಸಾಲಿನ ರಾಜ್ಯ ನಗರ ಸಾರಿಗೆ ನಿಧಿಯಡಿ ಸಹಾಯಾನುದಾನ ಒದಗಿಸಲಾದ ರಾಜ್ಯ ವಿವಿಧ ಸಾರಿಗೆ ಸಂಸ್ಥೆಗಳು, ಬೆಂಗಳೂರು ಮೆಟ್ರೊ, ಬೆಂಗಳೂರು ಮಹಾನಗರ ಪಾಲಿಕೆ, ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಯೋಜನೆ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳ ಅನುಷ್ಠಾನ ಕೈಗೆತ್ತಿಕೊಂಡಿರುವ ನಗರ ಸಾರಿಗೆ ಮೂಲಸೌಲ್ಯ/ಬಸ್ ಸೇವೆಗಳ ಯೋಜನೆಗಳ ಪೈಕಿ 87.73 ಕೋಟಿ ವೆಚ್ಚದ 19 ಯೋಜನೆಗಳು ಪೂರ್ಣಗೊಂಡಿದ್ದು, ರಾಜ್ಯ ನಗರ ಸಾರಿಗೆ ನಿಧಿಯಡಿ 38.5 ಕೋಟಿ ಸಹಾಯಾನುದಾನ ಪಡೆದಿರುತ್ತದೆ. ಅಲ್ಲದೆ 413.94 ಕೋಟಿ ಅಂದಾಜು ವೆಚ್ಚದ 42 ಇತರೆ ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿದ್ದು ಈವರೆವಿಗೆ ರಾಜ್ಯ ನಗರ ಸಾರಿಗೆ ನಿಧಿಯಿಂದ 254 ಕೋಟಿ ಸಹಾಯಾನುದಾನ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 7 ಹೊಸ ಯೋಜನೆಗಳು ಸ್ವೀಕೃತಗೊಂಡಿದ್ದು ಈವರೆವಿಗೆ ಎರಡು ಯೋಜನೆಗಳಿಗೆ ಸಹಾಯಾನುದಾನ ಒದಗಿಸಲು ಮಂಜೂರಾತಿ ನೀಡಲಾಗಿರುತ್ತದೆ.

**15. 2018–19ರ ಆಯವ್ಯಯದಲ್ಲಿನ ಘೋಷಣೆಗಳ ಮೇಲೆ ತೆಗೆದುಕೊಂಡ ಕ್ರಮ:**

| ಪ್ಯಾರಾ ನಂ. | ವಿಷಯ | ಕೈಗೊಂಡ ಕ್ರಮಗಳು |
|---|---|---|
| 303 | ಅನುಷ್ಠಾನಗೊಳಿಸಲು ರೈಲ್ವೆ ಮಂತ್ರಾಲಯದೊಂದಿಗೆ ಕೈ ಜೋಡಿಸುತ್ತೇವೆ. ನಮ್ಮ ಸರ್ಕಾರವು 2013 ರಿಂದ ಬೆಂಗಳೂರಿನಲ್ಲಿ ವಿಶ್ವ ದರ್ಜೆಯ ಉಪನಗರ ರೈಲು ಸಂಪರ್ಕ ಕಲ್ಪಿಸುವ ಕನಸನ್ನು ಸಾಕಾರಗೊಳಿಸುವಲ್ಲಿ ಸತತವಾಗಿ ಕಾರ್ಯೋನ್ಮುಖವಾಗಿದೆ. 10,929 ಕೋಟಿ ರೂ.ಗಳ ಈ ಯೋಜನೆಯ ವಿಸ್ತೃತ ಯೋಜನಾ ವರದಿಯ ಕರಡನ್ನು ರೈಲ್ವೆ ಮಂತ್ರಾಲಯಕ್ಕೆ 2016ರಲ್ಲಿ ಸಲ್ಲಿಸಲಾಗಿತ್ತು. ಕಳೆದ ವರ್ಷ ಕನ್ವೆನ್ಷನಲ್ ಕೋಚ್‌ಗಳನ್ನು ಮೆಮು ರೈಲುಗಳಿಗೆ ಪರಿವರ್ತಿಸುವ ಯೋಜನಾ ವೆಚ್ಚ ಶೇ.80ರಷ್ಟು ಅಂದರೆ 280 ಕೋಟಿ ರೂ.ಗಳನ್ನು ನಾವು ಒದಗಿಸಿದ್ದೆವು. ಇತ್ತೀಚೆಗೆ ಬೆಂಗಳೂರು ಉಪನಗರ ರೈಲು ಯೋಜನೆಗಾಗಿ ರೈಲ್ವೆ ಮಂತ್ರಾಲಯದೊಂದಿಗೆ ಜಂಟಿಯಾಗಿ ವಿಶೇಷ ಉದ್ದೇಶ ವಾಹಕವನ್ನು (SPV) ಪ್ರಾರಂಭಿಸಲು ನಿರ್ಧರಿಸಿದ್ದೇವೆ. 1745 ಕೋಟಿ ರೂ.ಗಳ ಯೋಜನಾ ವೆಚ್ಚದಲ್ಲಿ ಹಂತ–1 (Phase-1) ನ್ನು ಅನುಷ್ಠಾನಗೊಳಿಸಲು ಎಸ್‌ಪಿವಿಯ ಈಕ್ವಿಟಿಗಾಗಿ ನಾವು 349 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದೇವೆ. ಭಾರತ ಸರ್ಕಾರವು 17,000 ಕೋಟಿ ರೂ.ಗಳ ಯೋಜನಾ ವೆಚ್ಚದ | ಸಾರ್ವಜನಿಕ ಸಾರಿಗೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ಬೆಂಗಳೂರು ನಗರಕ್ಕೆ ಉಪನಗರ ರೈಲು ಸೇವೆ ಒದಗಿಸಲು ಕರ್ನಾಟಕ ಸರ್ಕಾರ ಮತ್ತು ಭಾರತೀಯ ರೈಲ್ವೆಯು ವೆಚ್ಚ ಹಂಚಿಕೆ ಮೂಲಕ 'ಬೆಂಗಳೂರು ಉಪನಗರ ರೈಲು ಯೋಜನೆ (ಹಂತ–1A) ಯ ಅನುಷ್ಠಾನವನ್ನು ಕೈಗೆತ್ತಿಕೊಂಡಿರುತ್ತದೆ. ಒಟ್ಟು 345 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಕಾಮಗಾರಿಗಳಾದ 15 ಜೋಡಿ ಸಾಂಪ್ರದಾಯಿಕ ಟ್ರೈನ್‌ಗಳನ್ನು ಮೆಮು ಟ್ರೈನ್‌ಗಳನ್ನಾಗಿ ಪರಿವರ್ತಿಸಲು (ರಾಜ್ಯದ ಪಾಲು ರೂ. 275 ಕೋಟಿ) ಮತ್ತು ಬಾಣಸವಾಡಿಯಲ್ಲಿ ಮೆಮು ನಿರ್ವಹಣಾ ಸೌಕರ್ಯ ನಿರ್ಮಾಣಕ್ಕಾಗಿ ಅಂದಾಜು ವೆಚ್ಚ ರೂ. 23.24 ಕೋಟಿ ಅನುಷ್ಠಾನಕ್ಕಾಗಿ ಕೈಗೆತ್ತಿಕೊಳ್ಳಲಾಗಿದೆ. ಅಂತೆಯೇ ನೈಋತ್ಯ ರೈಲ್ವೆಯವರು 16 ಘಟಕಗಳ ಮೆಮು ರೇಖುಗಳನ್ನು ಖರೀದಿಸಿದ್ದು, 6 ಜೋಡಿ ಟ್ರೈನ್‌ಗಳನ್ನು ಮೆಮು ಟ್ರೈನ್‌ಗಳನ್ನಾಗಿ ಪರಿವರ್ತಿಸಿದೆ. ರಾಜ್ಯ ಸರ್ಕಾರವು ಇಲ್ಲಿಯವರೆಗೆ 100 ಕೋಟಿ ರೂಪಾಯಿಗಳ ರಾಜ್ಯದ ಪಾಲಿನ ಈಕ್ವಿಟಿ ಬಿಡುಗಡೆ ಮಾಡಿರುತ್ತದೆ.<br><br>ರಾಜ್ಯದ ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ – ಕರ್ನಾಟಕ (K-RIDE) ಇದು ರೈಲ್ವೆ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿಯಾಗಿದ್ದು ಇದರ ಅಧೀನದ ಅಂಗ ಸಂಸ್ಥೆಯಾಗಿ ವಿಶೇಷ |

| | | |
|---|---|---|
| | ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಘೋಷಿಸಿರುವುದನ್ನು ನಾವು ಸ್ವಾಗತಿಸುತ್ತೇವೆ. ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸಲು ರೈಲ್ವೆ ಮಂತ್ರಾಲಯದೊಂದಿಗೆ ಕೈ ಜೋಡಿಸುತ್ತೇವೆ. | ಉದ್ದೇಶ ವಾಹಕ (SPV) ವನ್ನು ಸ್ಥಾಪಿಸಲಾಗುತ್ತಿದೆ.<br><br>ತರುವಾಯದಲ್ಲಿ, ನೈಋತ್ಯ ರೈಲ್ವೆಯವರು ದಿನಾಂಕ: 07.12.2018ರ ತಮ್ಮ ಪತ್ರದಲ್ಲಿ ರಸ್ತೆ ಮತ್ತು ರೈಲು ಸೇತುವೆ ಒಳಗೊಂಡ ಮೀಸಲು ಬೆಂಗಳೂರು ಉಪನಗರ ರೈಲು ಕಾರಿಡಾರುಗಳ ಕುರಿತಂತೆ ಮೆ. ರೈಟ್ಸ್ ಮೂಲಕ ತಯಾರಿಸಿದ ಕರಡು ಕಾರ್ಯಸಾಧ್ಯತಾ ಅಧ್ಯಯನದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಇದು ಬೆಂಗಳೂರು ನಗರಕ್ಕೆ ಮೀಸಲು ಉಪನಗರ ರೈಲು ಸೇವೆಯ ಅನುಷ್ಠಾನಕ್ಕೆ ಒಟ್ಟು ಅಂದಾಜು ವೆಚ್ಚ 23093 ಕೋಟಿ ಮೊತ್ತಕ್ಕೆ ರೈಲ್ವೆ ಮಂತ್ರಾಲಯದ ಉಪನಗರ ನೀತಿ 2018 ಕ್ಕನುಗುಣವಾಗಿ ಅನುಷ್ಠಾನಗೊಳಿಸಲು ಉಲ್ಲೇಖಿಸಲಾಗಿದೆ. ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆಯ ಸಹಭಾಗಿತ್ವದಲಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಅನುಮೋದನೆಯನ್ನು ದಿನಾಂಕ 26.02.2019ರ ಆದೇಶ ಸಂಖ್ಯೆ: ಯುಡಿಡಿ 06 ಪಿಆರ್‌ಜೆ 2019 ರಲ್ಲಿ ನೀಡಿದೆ. |
| 304 | ಸೈಕಲ್ ಹಂಚಿಕೆ ಯೋಜನೆಗಳ ಮತ್ತು ಪಾದಚಾರಿ ಪ್ರಯಾಣಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಸಲುವಾಗಿ ಪಾದಚಾರಿ ಮಾರ್ಗ ಸುಧಾರಣೆ ಮತ್ತು ಸೈಕಲ್ ಪಥಗಳ ಮೂಲಸೌಕರ್ಯ ಅಭಿವೃದ್ಧಿಯನ್ನು ಟೈರ್-2 ನಗರಗಳ ಆದ್ಯತೆಯ ಪ್ರದೇಶಗಳಲ್ಲಿ 25 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು. | ನಗರ ಭೂ ಸಾರಿಗೆ ನಿರ್ದೇಶನಾಲಯವು ಜಿಲ್ಲೆಯ "ಗ್ರೀನ್ ಲಿಂಕ್ಸ್" ಕಾರ್ಯಕ್ರಮವೊಂದನ್ನು ರೂಪಿಸಿದ್ದು, ಇದರಡಿ ಪ್ರಧಾನ ಕಛೇರಿಗಳ ಸಿಟಿ ಕಾರ್ಪೊರೇಷನ್/ಸಿ.ಎಂ.ಸಿ ಗಳಲ್ಲಿನ (ಬೆಂಗಳೂರು ಗ್ರಾಮೀಣ ಮತ್ತು ನಗರ ರಾಜ್ಯದ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿನ ಮಹಾನಗರ ಪಾಲಿಕೆಗಳು/ಪುರಸಭೆ ಗಳಲ್ಲಿ ಹೊರತುಪಡಿಸಿದಂತೆ ಜಿಲ್ಲೆಗಳನ್ನು ಹೊರತುಪಡಿಸಿ) ಮೋಟಾರು-ರಹಿತ ಸಾರಿಗೆ ಯೋಜನೆಗಳನ್ನು ತೆಗೆದುಕೊಳ್ಳಲು ಮೋಟಾರು-ರಹಿತ ಸಾರಿಗೆ ಯೋಜನೆಗಳ ವಿನ್ಯಾಸ, ಕಾರ್ಯಯೋಜನೆ "ಗ್ರೀನ್ ಲಿಂಕ್ಸ್" ಕಾರ್ಯಕ್ರಮವನ್ನು ರೂಪಿಸಿದೆ. ನಗರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಯೋಜನೆ. ಅನುದಾನ ರೂಪು ರೇಷೆಯೊಂದಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲು ಪ್ರಸ್ತಾವಿಸಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ನಅಇ 259 ಪಿಆರ್‌ಜೆ 2018 ದಿನಾಂಕ: 05.12.2018ರಲ್ಲಿ ಈ ಯೋಜನೆ ಕಾರ್ಯಾನುಷ್ಠಾನಕ್ಕೆ ಅನುಮೋದನೆ ನೀಡಿ ಆದೇಶ ಹೊರಡಿಸಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಿಂದ ಯೋಜನೆಗಳನ್ನು ಪಡೆದು ಅನುಷ್ಠಾನ ಕೈಗೊಳ್ಳಲು ಕ್ರಮ ವಹಿಸಿದೆ. |
| 305 | ಬೆಂಗಳೂರಿನಲ್ಲಿ ಮುಖ್ಯ ಪ್ರದೇಶಗಳಲ್ಲಿ ಸುಧಾರಿತ ಮಾಹಿತಿ ಮತ್ತು ಸಂಚಾರ ನಿರ್ವಹಣೆ ವ್ಯವಸ್ಥೆಯನ್ನು ಅನುಷ್ಠಾನಕ್ಕಾಗಿ ಜಪಾನ್ ಸರ್ಕಾರ ಒದಗಿಸುವ ನೆರವಿನೊಂದಿಗೆ | ಅನುದಾನ ಒಡಂಬಡಿಕೆಗೆ ಕೇಂದ್ರ ಸರ್ಕಾರವು ಜಪಾನ್ ಅಂತರ್‌ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಹಿ ಮಾಡಿದೆ. ಅನುದಾನ ವರ್ಗಾವಣೆ ಮತ್ತು ಪ್ರಸ್ತಾವಿತ ಸಂಚಾರ ನಿರ್ವಹಣಾ ವ್ಯವಸ್ಥೆಯನ್ನು ಬೆಂಗಳೂರು ನಗರದ |

| | | |
|---|---|---|
| | ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು. | ಕೇಂದ್ರ ಭಾಗದಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ. ಈ ಯೋಜನೆಯನ್ನು ಮೇ, 2019ರಲ್ಲಿ ಕಾರ್ಯಾರಂಭಗೊಳ್ಳುವ ನಿರೀಕ್ಷೆಯಿದೆ. |

| ಪ್ಯಾರಾ ನಂ. | ವಿಷಯ | ಕೈಗೊಂಡ ಕ್ರಮಗಳು |
|---|---|---|
| 140 | ಯಾವುದೇ ನಗರದಲ್ಲಿ ಸಾರ್ವಜನಿಕ ಸಾರಿಗೆ ಸೇವೆಯು ಪ್ರಮುಖ ಪಾತ್ರ ವಹಿಸುತ್ತದೆ. ಜನರ ಜೀವನ ಮಟ್ಟವು ಆ ನಗರದ ಸುಗಮ ಸಂಚಾರ ಮತ್ತು ಸಾರಿಗೆ ಸೌಲಭ್ಯದ ಲಭ್ಯತೆಯನ್ನು ಅವಲಂಭಿಸಿರುತ್ತದೆ. ಬೆಂಗಳೂರಿನ ಸಾರಿಗೆ ಸೇವೆಯ ಸಮಗ್ರ ಸುಧಾರಣೆಗಾಗಿ ನನ್ನ ಅಧ್ಯಕ್ಷತೆಯಲ್ಲಿ ಏಕೀಕೃತ ಭೂ ಸಾರಿಗೆ ಪ್ರಾಧಿಕಾರವನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಈ ಪ್ರಾಧಿಕಾರವು ಭೂ ಸಾರಿಗೆಗೆ ಸಂಬಂಧಿಸಿದ ಇತ್ಯಾದಿ ಸಂಸ್ಥೆಗಳ ನಡುವೆ ಸಮನ್ವಯ ವಹಿಸಿ ಕೈಗೆಟಕುವ ದರದಲ್ಲಿ ಅಡೆತಡೆಗಳಿಲ್ಲದ ಅನುಕೂಲಕರ ಸಾರಿಗೆ ವ್ಯವಸ್ಥೆಯನ್ನು ರೂಪಿಸಲು ಸಮಗ್ರ ಕಾರ್ಯತಂತ್ರ ಹಾಗೂ ಕ್ರಿಯಾ ಯೋಜನೆಯನ್ನು ರೂಪಿಸುತ್ತದೆ. | ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ (BMLTA) ಸ್ಥಾಪನೆಗೆ ಕರಡು ಕಾಯ್ದೆಯನ್ನು ಸಿದ್ಧಪಡಿಸಲಾಗಿದೆ. ಸದರಿ ಕರಡು ಕಾಯ್ದೆಯನ್ನು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ಪರಿಷ್ಕರಿಸಿದ ಕರಡು BMLTA ಕಾಯ್ದೆಯನ್ನು ಎಲ್ಲಾ ಪಾಲುದಾರ ಇಲಾಖೆ/ ಸಂಸ್ಥೆಗಳಿಗೆ ಕಳುಹಿಸಿ ಅವರ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆಯಲಾಗುತ್ತಿದ್ದು, ತರುವಾಯದಲ್ಲಿ ಕಾಯ್ದೆಯನ್ನು ಶಾಸಕಾಂಗ ಅನುಮೋದನೆಗಾಗಿ ಸಲ್ಲಿಸಲಾಗುವುದು. |

**16. ಇಲಾಖೆಗೆ ದೊರಕಿರುವ ರಾಷ್ಟ್ರೀಯ, ಅಂತರಾಷ್ಟ್ರೀಯ ಮಾನ್ಯತೆಗಳು/ಪ್ರಶಸ್ತಿಗಳು**

ಹೈದರಾಬಾದ್‌ನಲ್ಲಿ ನಡೆದ 10ನೇ ಅರ್ಬನ್ ಮೊಬಿಲಿಟಿ ಇಂಡಿಯಾ (ಯುಎಮ್‌ಐ) ಸಮಾವೇಶದಲ್ಲಿ ಮೈಸೂರಿನ ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆಗೆ ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಪ್ರಶಸ್ತಿಗಾಗಿ ಗುರುತಿಸಲಾಗಿದೆ. ಸ್ವಚ್ಛತೆಗೆ ಹೆಸರಾದ ಮೈಸೂರು ನಗರಕ್ಕೆ ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆಗಾಗಿ ವಿಶೇಷ ಪ್ರಶಸ್ತಿಯನ್ನು ದೇಶದಲ್ಲಿನ ಮೋಟಾರುರಹಿತ ಸಾರಿಗೆ ಯೋಜನೆಗಳ ವರ್ಗದಡಿ ಅನುಷ್ಠಾನಕ್ಕಾಗಿ ನವೆಂಬರ್ 04 ರಿಂದ 06 ರವರೆಗೆ ಹೈದರಾಬಾದಿನಲ್ಲಿ ನಡೆದ ಸಮಾವೇಶದಲ್ಲಿ ನೀಡಲಾಗಿದೆ.

**17. ಇಲಾಖೆಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:**

ನಗರ ಭೂ ಸಾರಿಗೆ ನಿರ್ದೇಶನಾಲಯವು www.urbantransport.kar.gov.in, www.bmlta.org ವೆಬ್‌ಸೈಟ್‌ಗಳಲ್ಲಿ ನಿರ್ದೇಶನಾಲಯದ ವಿಷಯಗಳನ್ನು ಆಗಿಂದ್ದಾಗೆ ಅಳವಡಿಸಲಾಗುವುದು/ ಪರಿಷ್ಕರಿಸಲಾಗುವುದು.

**18. ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು, ಪದನಾಮಗಳು ಮತ್ತು ಇತರೆ ವಿವರಗಳು**

| ಕ್ರ.ಸಂ. | **ಸಾರ್ವಜನಿಕ ಪ್ರಾಧಿಕಾರ** | **ಸಾರ್ವಜನಿಕ ಮಾಹಿತಿ ಅಧಿಕಾರಿ/ ಸಹಾಯಕ ಮಾಹಿತಿ ಅಧಿಕಾರಿಯ ಹೆಸರು, ಹುದ್ದೆ ಮತ್ತು ಕಛೇರಿ ದೂರವಾಣಿ ಸಂಖ್ಯೆ/ ಶ್ರೀ/ಶ್ರೀಮತಿ** | **ಮೇಲ್ಮನವಿ ಪ್ರಾಧಿಕಾರದ ಹೆಸರು, ಹುದ್ದೆ ಮತ್ತು ದೂರವಾಣಿ ಸಂಖ್ಯೆ ಶ್ರೀ/ಶ್ರೀಮತಿ** |
|---|---|---|---|
| 1. | ನಗರ ಭೂ ಸಾರಿಗೆ ನಿರ್ದೇಶನಾಲಯ | ಶ್ರೀ. ಎನ್. ಮುರಳಿಕೃಷ್ಣ, ವಿಶೇಷಾಧಿಕಾರಿ 080–22226627 dultbangalore@gmail.com | ಶ್ರೀ. ವಿ. ಪೊನ್ನುರಾಜ್, ಭಾಆಸೇ, ಆಯುಕ್ತರು 080–22226627 dultbangalore@gmail.com |

ನಗರ ಭೂ ಸಾರಿಗೆ ನಿರ್ದೇಶನಾಲಯವು ಮಾಹಿತಿಗಳನ್ನು ಮಾರ್ಚ್ 2017ರವರೆಗೆ ಪರಿಷ್ಕೃತಗೊಳಿಸಿದೆ.